ಓ ಎಸ್ ನಂ. 193/2019
ಪಿ ಡಬ್ಲ್ಯು 1
ದಿನಾಂಕ 28-01-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿಗಳ ಪರಃ ಶ್ರೀ ಎ ಎಂ ಆರ್ ವಕೀಲರಿಂದಃ

ನಾನು ಪಿಯುಸಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಅಲ್ಪಸ್ವಲ್ಪ ಕಾನೂನಿನ ಅರಿವು ಇರುತ್ತದೆ. ಪ್ರಸ್ತುತ ದಾವೆಯನ್ನು ನನ್ನ ತಾಯಿ ಹೂಡಿರುತ್ತಾರೆ ಎಂದರೆ ಸರಿ. ಯಾವ ಉದ್ದೇಶಕ್ಕಾಗಿ ನನ್ನ ತಾಯಿ ಈ ದಾವೆ ಹೂಡಿದ್ದಾರೆ ಎಂದರೆ ಸಾಕ್ಷಿ ಅವರಿಗೆ ಆಸ್ತಿಯಲ್ಲಿ ಪಾಲು ಬರಬೇಕಾಗಿ ದಾವೆ ಹೂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಾಯಿ ಯಾವಾಗ ಜನಿಸಿರುತ್ತಾರೆಂದು ನನಗೆ ಗೊತ್ತಿದೆಯಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನನ್ನ ತಾಯಿ ಶಾಲೆಗೆ ಹೋಗಿರುತ್ತಾರಾ ಎಂದರೆ ಸಾಕ್ಷಿ ಹೋಗಿರಬಹುದು ನನಗೆ ಅಷ್ಟಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ಲಕ್ಯಾ ಹೋಬಳಿ ತಡಬೆನಹಳ್ಳಿ ಗ್ರಾಮದಲ್ಲಿ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ನನ್ನ ತಾಯಿ 1945-46 ನೇ ಸಾಲಿನಲ್ಲಿ 1 ನೇ ತರಗತಿಗೆ ವಿದ್ಯಾಭ್ಯಾಸಕ್ಕೆ ಸೇರಿರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ನನ್ನ ತಾಯಿಯ ತಂದೆಯ ಹೆಸರು ಸಿದ್ದೇಗೌಡ ಆಗಿರುತ್ತದೆ. ಸದರಿ ಸಿದ್ದೇಗೌಡರವರು ಯಾವಾಗ ಮರಣ

ಹೊಂದಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿ ಸಿದ್ದೇಗೌಡರವರು 2004 ಕ್ಕಿಂತ ಮುಂಚೆಯೇ ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಅಜ್ಜ ಸಿದ್ದೇಗೌಡರವರಿಗೆ ಇಬ್ಬರು ಹೆಂಡತಿಯರು ಅವರೆಂದರೆ ತಿಮ್ಮಮ್ಮ ಮತ್ತು ರಂಗಮ್ಮ. ಸದರಿ ತಿಮ್ಮಮ್ಮರವರಿಗೆ ಒಟ್ಟು 4 ಜನ ಮಕ್ಕಳು ಅವರೆಂದರೆ 1. ಹನುಮಂತೆ ಗೌಡ 2. ನನ್ನ ತಾಯಿಯಾದ ಅಕ್ಕಮ್ಮ 3. ಜಾನಮ್ಮ 4. ರತ್ನಮ್ಮ. ರಂಗಮ್ಮರವರಿಗೆ 9 ಜನ ಮಕ್ಕಳು ಅವರೆಂದರೆ 1. ಲಕ್ಷ್ಮೀಗೌಡ 2. ತಿಮ್ಮಮ್ಮ 3. ಅನಂತರಾಮೇಗೌಡ 4. ಕೃಷ್ಣಮೂರ್ತಿ 5. ಯಶೋಧಮ್ಮ 6.ಲೋಕೇಶ 7.ಸುರೇಶ 8. ವಸಂತಕುಮಾರ್ 9. ಸುಶೀಲಮ್ಮ ಆಗಿರುತ್ತಾರೆ.

2. ನನ್ನ ಮುಖ್ಯ ವಿಚಾರಣಾ ಪರಮಾಣ ಪತ್ರದಲ್ಲಿ ನನ್ನ ಅಜ್ಜ ಸಿದ್ದೇಗೌಡ ಮತ್ತು ಅವರ ಸಹೋದರ ಚಿಕ್ಕೇಗೌಡ ವಿಭಾಗ ಮಾಡಿಕೊಂಡಿದ್ದಾರೆ ಎಂದು ತಿಳಿಸಿದ್ದು ಆ ರೀತಿ ಅವರು ಯಾವಾಗ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ನನ್ನ ಅಜ್ಜ ಎರಡನೇ ಮದುವೆಯಾದ ನಂತರ ವಿಭಾಗವಾಗಿದೆ ಎಂದು ನುಡಿಯುತ್ತಾರೆ. ನಿಪಿ-2 ರ ವಂಶವೃಕ್ಷದಲ್ಲಿ ಚಿಕ್ಕೇಗೌಡರವರ ಹೆಸರನ್ನು ಹೇಳಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಿದ್ದೇಗೌಡರವರ ಎರಡನೇ ಹೆಂಡತಿ ರಂಗಮ್ಮರವರ 9 ಜನ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಲಾಗಿದೆಯಾ ಎಂದರೆ ಸಾಕ್ಷಿ

ಇಲ್ಲವೆಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಅವರು ಪ್ರತ್ಯೇಕವಾಗಿರುವುದರಿಂದ ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದು ನುಡಿಯುತ್ತಾರೆ. ಸಿದ್ದೇಗೌಡರವರಿಗೆ ಸುಮಾರು 20 ಎಕರೆ ಜಮೀನು ಇತ್ತು ಎಂದರೆ ಸಾಕ್ಷಿ ಅಷ್ಟು ಇರಲಿಲ್ಲ ಸುಮಾರು 4 ಎಕರೆ ಇರಬಹುದು ಎಂದು ನುಡಿಯುತ್ತಾರೆ. ಸಿದ್ದೇಗೌಡರವರ ಮೊದಲನೇ ಹೆಂಡತಿ ತಿಮ್ಮಮ್ಮರವರ ಮೊದಲನೇ ಮಗ ಹನುಮಂತೆಗೌಡ ಎಂದರೆ ಸರಿ. ಸದರಿ ಹನುಮಂತೇಗೌಡರವರು ಮೃತ ಪಟ್ಟಿರುತ್ತಾರೆ ಎಂದರೆ ಸಾಕ್ಷಿ ಹೌದು 2023 ರಲ್ಲಿ ಎಂದು ನುಡಿಯುತ್ತಾರೆ. ಮೃತ ಹನುಮಂತೇಗೌಡರವರ ವಿವಾಹ 1958 ರಲ್ಲಿಯೇ ಆಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರ ವಿವಾಹವಾದ 5-6 ತಿಂಗಳುಗಳ ನಂತರ ಸಿದ್ದೇಗೌಡರವರು ಅವರಿಗೆ ವಿಭಾಗ ನೀಡಿ ಮನೆಯಿಂದ ಕಳುಹಿಸಿರುತ್ತಾರೆ ಎಂದರೆ ಸಾಕ್ಷಿ ಅವರೊಬ್ಬರನ್ನೆ ಕಳುಹಿಸಿಲ್ಲ, ತಿಮ್ಮಮ್ಮರವರ ಎಲ್ಲಾ ಮಕ್ಕಳಿಗೂ ವಿಭಾಗ ನೀಡಿ ಕಳುಹಿಸಿರುತ್ತಾರೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಹನುಮಂತೇಗೌಡರವರಿಗೆ ಮಾತ್ರ ವಿಭಾಗ ನೀಡಿ ಮನೆಯಿಂದ ಹೊರಗೆ ಕಳುಹಿಸಲಾಗಿದ್ದು, ತಿಮ್ಮಮ್ಮರವರ ಮೂರು ಜನ ಹೆಣ್ಣು ಮಕ್ಕಳ ವಿವಾಹ ಆಗಿಲ್ಲದ ಕಾರಣ ಅವರನ್ನು ತನ್ನ ಜತೆಗೆ ಇಟ್ಟುಕೊಂಡಿದ್ದರು ಎಂದರೆ ಸರಿ. ಸಿದ್ದೇಗೌಡರವರ ಆಸ್ತಿಗಳನ್ನು 2023 ರಲ್ಲಿ ಚಿಕ್ಕಮಗಳೂರು ನೊಂದಣಿ ಕಚೇರಿಯಲ್ಲಿ

ಸಿದ್ದೇಗೌಡರವರ ಎರಡನೇ ಹೆಂಡತಿಯಾದ ರಂಗಮ್ಮರವರ ಮಕ್ಕಳು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸಿದ್ದೇಗೌಡರವರು ಅವರ ಮೊದಲನೇ ಹೆಂಡತಿಯ ತಿಮ್ಮಮ್ಮರವರ ಮಗನಾದ ಹನುಮಂತೇಗೌಡರವರನ್ನು ಮನೆಯಿಂದ ಹೊರಗೆ ಕಳುಹಿಸುವಾಗ ಕೆಂಗೇನಹಳ್ಳಿ ಗ್ರಾಮದಲ್ಲಿ 2 ಎಕರೆ ಜಮೀನು ಮತ್ತು ಉದ್ದೆಬೋರನಹಳ್ಳಿ 2 ಎಕರೆ ಜಮೀನು ಮಾತ್ರ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ದಾಖಲೆಯಲ್ಲಿ ಅಷ್ಟು ಮಾತ್ರ ಇರಬಹುದು ಆದರೆ ಇನ್ನೂ ಕೆಲವು ಆಸ್ತಿಗಳನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಬೇರೆ ಆಸ್ತಿಗಳನ್ನುಕೊಟ್ಟ ಬಗ್ಗೆ ದಾಖಲಾತಿಗಳು ನನ್ನ ಬಳಿ ಇದೆಯಾ ಎಂದರೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ಅವುಗಳನ್ನು ಹಾಜರುಪಡಿಸಿದ್ದೇನಾ ಎಂದರೆ ಸಾಕ್ಷಿ ಇಲ್ಲ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಉದ್ದೆಬೋರನಹಳ್ಳಿಯಲ್ಲಿ ಹನುಮಂತೇಗೌಡರವರಿಗೆ ನೀಡಿದ 2 ಎಕರೆ ಜಮೀನು ಈಗಲೂ ಸಹ ಸಿದ್ದೇಗೌಡರವರ ಎರಡನೇ ಹೆಂಡತಿ ರಂಗಮ್ಮರವರ ಹೆಸನರಿಲ್ಲಿರುತ್ತದೆ ಎಂದರೆ ಸರಿ. ದೇವರಾಜೇಗೌಡ ಆದ ನಾನು 1 ರಿಂದ 3ನೇ ಪ್ರತಿವಾದಿಗಳ ವಿರುದ್ಧ ತಹಸೀಲ್ದಾರ್ ನ್ಯಾಯಾಲಯದಲ್ಲಿ ಆರ್ ಆರ್ ಟಿ ನಂ.199/2018-2019 ರಂತೆ ಪ್ರಕರಣ ಸಲ್ಲಿಸಿದ್ದ ಎಂದರೆ ಸರಿ. ಸದರಿ ಪ್ರಕರಣ ಪ್ರತಿವಾದಿ 1 ರಿಂದ 3 ರವರ ಪರ ದಿನಾಂಕ 07/11/2019 ರಂದು

ಆದೇಶವಾಗಿರುತ್ತದೆ ಎಂದರೆ ಸಾಕ್ಷಿ ಪ್ರಸ್ತುತ ಸಿವಿಲ್ ದಾವೆ ಇರುವುದನ್ನು ಮರೆಮಾಚಿ ಆದೇಶ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯನ್ನು ದಿನಾಂಕ 13/11/2019 ರಂದು ಹೂಡಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ ತಾನು ಸಲ್ಲಿಸಿರುವ ವಾದಪತ್ರವನ್ನು ತೋರಿಸಿ ಅದರಂತೆ ದಿನಾಂಕ 13/11/2019 ರಂದು ಸಲ್ಲಿಸಲಾಗಿರುತ್ತದೆ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಲಕ್ಷ್ಮೀಗೌಡರವರ ಆಸ್ತಿಯನ್ನು ಗಬಳಿಸುವ ಉದ್ದೇಶದಿಂದ ಪ್ರಸ್ತುತ ದಾವೆಯನ್ನು ಹೂಡಲಾಗಿದೆ ಎಂದರೆ ಸರಿಯಲ್ಲ.

3. ನನ್ನ ತಾಯಿ ಈಗ ಆರೋಗ್ಯವಾಗಿದ್ದಾರೆ ಎಂದರೆ ಸರಿ. ನನ್ನ ತಾಯಿಗೆ ನ್ಯಾಯಾಲಯಕ್ಕೆ ಬಂದು ತೊಂದರೆ ಇಲ್ಲ ಎಂದರೆ ಸರಿ. ಆದರೂ ಸಹ ನಾನು ದುರುದ್ದೇಶದಿಂದ ನನ್ನ ತಾಯಿಯಿಂದ ವಿಶೇಷ ಅಧಿಕಾರ ಪತ್ರ ಪಡೆದು ಈ ದಿನ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ನನಗೆ ಅಧಿಕಾರ ಪತ್ರ ಕೊಡುವ ಸಮಯದಲ್ಲಿ ಅವರಿಗೆ ಅನಾರೋಗ್ಯ ಸಮಸ್ಯೆ ಇದ್ದು ಈಗ ಆರೋಗ್ಯದಿಂದ ಇದ್ದಾರೆ ಎಂದು ನುಡಿಯುತ್ತಾರೆ. 2019 ರಲ್ಲಿ ನನ್ನ ತಾಯಿ ಆರೋಗ್ಯದಿಂದ ಇದ್ದರಾ ಎಂದರೆ ಸಾಕ್ಷಿ ಅವರಿಗೆ ತೀರಾ ಆರೋಗ್ಯ ಸಮಸ್ಯೆ ಇರಲಿಲ್ಲ ಆದರೆ ನಿಶಕ್ತಿ ಇತ್ತು ಎಂದು ನುಡಿಯುತ್ತಾರೆ. ನಿಪಿ-1 ರಂತೆ ನಾನು 26/07/2021 ರಂದು ನನ್ನ ತಾಯಿಯಿಂದ ವಿಶೇಷ ಅಧಿಕಾರ

ಪಡೆದಿರುತ್ತೇನೆ ಎಂದರೆ ಸರಿ. ಸದರಿ ನಿಪಿ-1 ರ ಛಾಪಾಕಾಗದವನ್ನು ಯಾವ ದಿನಾಂಕ ಪಡೆಯಲಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಛಾಪಾ ಕಾಗದವನ್ನು ದಿನಾಂಕ **11/11/2019** ರಂದು ಪಡೆದಿರುತ್ತೇನೆ ಎಂದರೆ ಸಾಕ್ಷಿ ದಾಖಲೆ ಪರಿಶೀಲಿಸಿ ಹೌದು ಎಂದು ನುಡಿಯುತ್ತಾರೆ. ನಾನು ಉದ್ದೇಶಪೂರ್ವಕವಾಗಿ ದಾವೆ ಹೂಡುವ ಮೊದಲೇ ಛಾಪಾ ಕಾಗದವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.